ವಿದ್ಯಾರ್ಥಿಗಳ ಬೌದ್ಧಿಕ ಮಟ್ಟಕ್ಕೆ ಹೋಲಿಸಿದರೆ ಸರಿತೂಗುತ್ತಾರೆಯೇ ಅಥವಾ ಹಿಂದೆ ಬೀಳುತ್ತಾರೆಯೇ? ಪ್ರಶ್ನೆಗಳು ಕಾಡುತ್ತವೆ ತಾನೆ?

ಪೀಸಾ ಟೆಸ್ಟ್ (**Programme for International student assessment– PISA**) ಎಂಬ ಜಗತ್ತಿನ 40 ರಾಷ್ಟ್ರಗಳ 15 ವರ್ಷ ವಯಸ್ಸಿನ ವಿದ್ಯಾರ್ಥಿಗಳಿಗೆ ನಡೆಯುವ ಪರೀಕ್ಷೆಯೊಂದಿದೆ. ಇದು ಇಡೀ ಜಗತ್ತಿನಲ್ಲಿ ನಮ್ಮ ವಿದ್ಯಾರ್ಥಿಗಳು ಇತರ ದೇಶಗಳಿಗೆ ಹೋಲಿಸಿದರೆ ಯಾವ ಮಟ್ಟದಲ್ಲಿದ್ದಾರೆ ಎಂಬುದಕ್ಕೆ ಒಂದು ಮಾಪನ. 2006ರ ವೇಳೆಗಾಗಲೇ ಫಿನ್ಲೆಂಡ್ 57 ರಾಷ್ಟ್ರಗಳಲ್ಲಿ ಮೊದಲ ಸ್ಥಾನದಲ್ಲಿದೆ! ಅದಕ್ಕೆ ಹೆಲ್ಸಿಂಕಿಯ (ಫಿನ್‌ಲ್ಯಾಂಡ್‌ನ ರಾಜಧಾನಿ) ಶಾಲಾ ಶಿಕ್ಷಕನ ಪ್ರತಿಕ್ರಿಯೆಯೇನು? “ನಾವು ಅಷ್ಟು ಮುಂದಿದ್ದೇವೆ ಎಂಬುದು ಗೊತ್ತಿರಲೇ ಇಲ್ಲ” ಎನ್ನುವುದು!

ನಾವು ವಿಶ್ವ ಹಾಕಿ ಛಾಂಪಿಯನ್‌ಶಿಪ್‌ನ ಗೆಲುವನ್ನು ಎದೆಬಡಿದು ಸ್ವಾಗತಿಸಿದಂತೆ ‘ಪೀಸಾ’ ಟೆಸ್ಟ್‌ನ ಗೆಲುವಿನ ಬಗ್ಗೆ ಅವರು ಉದ್ವೇಗವನ್ನೂ ತಾಳಿಲ್ಲ. ಅದು ಅಷ್ಟೇನೂ ಮುಖ್ಯವಲ್ಲ ಎನ್ನುವ ಅಲ್ಲಿನ ಶಿಕ್ಷಕರು ಹೇಳುತ್ತಾರೆ– ‘‘ನಾವು ನಮ್ಮ ಮಕ್ಕಳಿಗೆ ತರಬೇತಿ ನೀಡುವುದು ಹೇಗೆ ಕಲಿಯಬೇಕೆಂಬುದಕ್ಕೆ, ಹೇಗೆ ಪರೀಕ್ಷೆ ಎದುರಿಸುವುದೆಂದಲ್ಲ! ನಮಗೆ ‘ಪೀಸಾ’ದ ಫಲಿತಾಂಶದಲ್ಲಿ ಹೆಚ್ಚು ಆಸಕ್ತಿಯಿಲ್ಲ. ‘ನಾವೇನು’ ಎಂಬುದನ್ನು ಅದು ತೋರಿಸುವುದಿಲ್ಲ!’’

ಫಿನ್‌ಲ್ಯಾಂಡ್‌ನ ಗೆಲುವು ನೋಡಿದ ಅಮೆರಿಕಾ ತನ್ನ ಶಿಕ್ಷಕರಿಗೆ ಸವಾಲಿನ ಕರೆ ನೀಡಿತ್ತು. ಯಾವ ರೀತಿಯಲ್ಲಿಯಾದರೂ ಮಕ್ಕಳನ್ನು ಮೊದಲಿಗರಾಗಿ ನಿಲ್ಲುವಂತೆ ಮಾಡಿ, ನಿಮಗೆ ಹೆಚ್ಚಿನ ಸೌಲಭ್ಯ ನೀಡುತ್ತೇವೆ ಎಂದು. ಅದಕ್ಕೆ 24 ವರ್ಷಗಳ ಶಿಕ್ಷಕನಾಗಿ ಅನುಭವವಿರುವ ಫಿನ್‌ಲ್ಯಾಂಡ್‌ನ ಟಿಮೋ ಹೆಯ್‌ಕಿನೆನ್ ಹೇಳಿದ್ದು ‘ಹಾಗೇನಾದರೂ ಶಿಕ್ಷಕರಿಗೆ ಫಿನ್‌ಲ್ಯಾಂಡ್‌ನಲ್ಲಿ ಸವಾಲು ನೀಡಿದರೆ, ಅವರು ಹತಾಶೆಯಿಂದ ಶರ್ಟು ಹರಿದುಕೊಂಡಾರು. ಬರೀ ಅಂಕಿ–ಅಂಶಗಳನ್ನು ಪರೀಕ್ಷೆಗಳ ಮೂಲಕ ಅಳೆದರೆ ಮಾನವೀಯ ಆಯಾಮವನ್ನು ನಾವು ಕಳೆಯುತ್ತೇವೆ’ ಎಂದು.

‘ಸಮಾನತೆ’ ಎನ್ನುವುದು ಫಿನ್‌ಲ್ಯಾಂಡ್‌ನ ಶಿಕ್ಷಣದಲ್ಲಿ ಅತಿ ಮುಖ್ಯ ಪದ. ಎಲ್ಲಾ ಎಡ ಮತ್ತು ಬಲ ರಾಜಕೀಯ ಪಕ್ಷಗಳೂ ಇದನ್ನು ಒಪ್ಪುತ್ತವೆ. ಅಲ್ಲಿನ ಶಿಕ್ಷಣ– ಪರೀಕ್ಷೆ ಪದ್ಧತಿಗಳನ್ನು ಅಧ್ಯಯನ ಮಾಡುವ ಇತರ ದೇಶಗಳ ಶಿಕ್ಷಕರು ಸರ್ವಾನುಮತದಿಂದ ಒಪ್ಪುವುದು “ಫಿನ್‌ಲ್ಯಾಂಡ್ ಕಳೆದ 40 ವರ್ಷಗಳಲ್ಲಿ ತೋರಿಸಿರುವ ಶೈಕ್ಷಣಿಕ ಪ್ರಗತಿಯ ಹಿಂದಿರುವುದು ಮಕ್ಕಳ ‘ಬಾಲ್ಯ’ಕ್ಕೆ ಆ ರಾಷ್ಟ್ರ ಹೊಂದಿರುವ ಪ್ರೀತಿ, ವೃತ್ತಿಪರ ನಂಬಿಕೆಗೆ ಅರ್ಹವಾದ ಶಿಕ್ಷಕರಿಗೆ ಅದು ತೋರಿಸುವ ಗೌರವ–ಆದರಗಳು ಮತ್ತು ಮಕ್ಕಳು ಹೇಗೆ ಕಲಿಯಬಲ್ಲರು ಎಂಬುದರ ಬಗೆಗಿನ ಆಳವಾದ ಜ್ಞಾನ” ಎಂದು.

ಚೀನಾ, ಅಮೆರಿಕಾ, ಜಪಾನ್‌ಗಳಲ್ಲಿಯೂ ನಮ್ಮ ಭಾರತದಂತೆ ಆಗಾಗ್ಗೆ ಪರೀಕ್ಷೆಗಳು, ಸ್ಪರ್ಧಾತ್ಮಕ ನೂಕುನುಗ್ಗಲು ಬಲವಾಗಿಯೇ ಇವೆ. ಹಾಗಾಗಿ ಸಹಜವಾಗಿ ಫಿನ್‌ಲ್ಯಾಂಡ್‌ನ ಶಿಕ್ಷಣ ಕ್ರಮದ ಬಗ್ಗೆ ಟೀಕೆಗಳನ್ನು ಈ ದೊಡ್ಡಣ್ಣಗಳು ಮಾಡಿವೆ. ಅದರಲ್ಲಿ ಮೊದಲನೆಯದು ಜನಸಂಖ್ಯೆ ಕಡಿಮೆಯಿದ್ದರೆ ಹೀಗೆಲ್ಲಾ ಮಾಡಬಹುದು ಎನ್ನುವುದು. ಆದರೆ ವ್ಯವಸ್ಥೆಯ ಬದಲಾವಣೆಗೆ ನಮ್ಮ ಧೋರಣೆಯೂ ಬದಲಾಗಬೇಕಷ್ಟೆ! ಏಕೆಂದರೆ ಇಡೀ ಚೀನಾ, ಭಾರತ ಅಥವಾ ಅಮೆರಿಕೆಯಷ್ಟು ಫಿನ್‌ಲ್ಯಾಂಡ್ ದೊಡ್ಡದಲ್ಲದಿರಬಹುದು. ಆದರೆ ರಾಜ್ಯಗಳು ಇವೆಯಷ್ಟೆ. ಇವುಗಳ ರಾಜ್ಯಗಳು ಫಿನ್‌ಲ್ಯಾಂಡ್‌ನಷ್ಟೇ ಚಿಕ್ಕದಾಗಿವೆ! ಅಥವಾ ಬದಲಾದ ಪರೀಕ್ಷೆ ಕ್ರಮದಿಂದ ಸುಧಾರಣೆ ಬರಬಹುದೆ ಎಂಬುದು ಮಾಡದೆ ಗೊತ್ತಾಗಲು ಹೇಗೆ ಸಾಧ್ಯ?

## ಭಾರತದಲ್ಲಿ ಏನಾಗಿದೆ?

ಭಾರತಕ್ಕೆ ಬರೋಣ. ಭಾರತದಲ್ಲಿ ಈಗಿರುವ ಸಿಬಿಎಸ್‌ಇ ಕ್ರಮದಲ್ಲಿ **CCE Continuous and comprehensive evaluation** ಪದ್ಧತಿ, ಗ್ರೇಡಿಂಗ್ ಅಳವಡಿಸಲಾಗಿದೆ. ಪಠ್ಯೇತರ ಚಟುವಟಿಕೆಗಳನ್ನು ಪಠ್ಯಪೂರಕ ಚಟುವಟಿಕೆಗಳಾಗಿಸಿ ಅವುಗಳಿಗೂ


